ಮಾತುಗಳನ್ನು ಹೇಳಿ 'ಆಕೆ ದೇವರಂಥ ಮನುಷ್ಯಳು ನಿನಗೂ ಗೊತ್ತಲ್ಲ ಕರಿವೀರ, ಎಂದಾದರೂ ನಿನಗೆ ಎದುರು ನಿಂತು ಮಾತಾಡಿದ್ದಳಾ? ಎಷ್ಟು ಚೆನ್ನಾಗಿ ಮನೆಕೆಲಸ ಮಾಡಿಕೊಂಡು ಹೋಗುತ್ತಿದ್ದಳು, ಮನೆಗೆ ಬರುವ ನೆಂಟರಿಷ್ಟರನ್ನು ನಿನಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಂಡು ಕಳಿಸುತ್ತಿದ್ದಳು. ಯಾರೋ ಮಾಡಿಸಿದ ಮಾಟಕ್ಕೆ ಅವಳು ಬಲಿಯಾದಳು. ಯಾರೋ ನಮಗೆ ಆಗದವರು ಮಾಟ ಮಾಡಿಸಿದ್ದಾರೆ ಕರಿವೀರ, ನನ್ನ ಮನಸ್ಸು ಪದೇ ಪದೇ ಹೇಳ್ತಿದೆ ನೋಡು ನೀನು ಎಷ್ಟು ಸೊರಗಿ ಹೋಗ್ತಿದೀಯಾ, ಹಿಂದೆ ನಮ್ಮ ಮನೆತನದಲ್ಲಿ ಈ ರೀತಿ ಎಂದೂ ಆಗಿರಲಿಲ್ಲ!' ಎಂದು ಸಮಾಧಾನ ಹೇಳುತ್ತಿದ್ದರು.

ತಿಂಗಳು ಕಳೆದರೂ ಕರಿವೀರ ಊರಿನ ಮನೆ ಕಡೆ ಬಂದು ಹೆಂಡತಿಯನ್ನು ಮಾತನಾಡಿಸದೇ ಇದ್ದುದ್ದನ್ನು ಕಂಡು ಹನುಮಕ್ಕ ಕೊಂಚ ಗಾಬರಿಗೆ ಬಿದ್ದಳು. ಅವನ ತಲೆಯೊಳಗೆ ಹೊಕ್ಕಿರುವ, ಹೆಂಡತಿ ಬೇರೆಯವನೊಂದಿಗೆ ಹೋದ ಸಂಗತಿಯ ಈ ವಿಷವನ್ನು ಹೊರತೆಗೆಯುವ ಬಗ್ಗೆ ಅವಳ ನೀತಿ ಮಾತುಗಳಿಂದ ಸರಿಯಾಗದೇ ಹೋದದ್ದಕ್ಕೆ ಗಲಿಬಿಲಿಗೊಂಡಳು. ಮಾಡಿಸಿರಬಹುದಾದ ಮಾಟವನ್ನು ಹೊರತೆಗೆಸುವ ಬಗ್ಗೆ ಗಂಭೀರವಾಗಿ ಆಲೋಚಿಸಿದಳು. ಅವನು ಮತ್ತು ಅನ್ನಪೂರ್ಣ ಮೊದಲಿನಂತೆ ಬಾಳಿದರೆ ಸಾಕು ಎಂದು ಸುಭದ್ರಮ್ಮ, ಹನುಮಕ್ಕ ಸದಾ ಅದೇ ಆಲೋಚನೆಯಲ್ಲಿ ಏನ್ನನ್ನಾದರೂ ಪರಿಹಾರ ಕಂಡುಕೊಳ್ಳಲು ಶ್ರಮಪಡುತ್ತಿದ್ದರು.

'ಸುಭದ್ರ, ಮನಸ್ಸಿಗೆ ನಾಟಿರುವ ಮುಳ್ಳನ್ನು ಅವನಿಂದ ಹೊರತೆಗೆಯದ ಹೊರತು ಇದು ಸರಿಯಾಗದು ಕಣೇ, ನಾಳೆ ಬೆಳಗ್ಗೆ ಭೈರದೇವರಗುಡ್ಡಕ್ಕೆ ಹೋಗಿ, ಯಾರಾದರೂ ಮಾಟದ ಮದ್ದನ್ನು ಇಟ್ಟಿದ್ದಾರೇನೋ, ಮನೆಯಲ್ಲಿಯೋ, ತೋಟದಲ್ಲಿಯೋ ಅಥವಾ ಆಕೆಗೆ ಊಟದಲ್ಲಿ, ಉಡುವ ಬಟ್ಟೆಯಲ್ಲಿ ಮಾಟ ಮಾಡಿಸಿರಬಹುದು. ಇದನ್ನು ಮಂತ್ರವಾದಿ ಪರಮೇಶ್ವರಪ್ಪನನ್ನು ಕೇಳಿ, ಇದು ನಿಜವೇ ಆಗಿದ್ದಲ್ಲಿ ಹೇಗಾದರೂ ಮಾಡಿ ಆತನನ್ನು ಇಲ್ಲಿಗೆ ಕರೆತಂದು ಮಾಟದ ತೀರುವಳಿಯನ್ನು ಮಾಡಿಸೋಣ' ಎಂದು ತಂಗಿಗೆ ಹೇಳಿದಳು. 'ಅಕ್ಕ, ಉಳಿದಿರುವುದು ಇದೊಂದೆ ದಾರಿ, ನಡೆಯಕ್ಕ ಹೋಗೋಣ' ಎಂದು ಭೈರೇದೇವರ ಗುಡ್ಡಕ್ಕೆ ಹೊರಟರು.

ಎರಡು ದಿನದಲ್ಲಿ ಪರಮೇಶ್ವರಪ್ಪನನ್ನು ಕರೆದುಕೊಂಡು ಬಂದು, ತೋಟದ ಜಮೀನಿನಲ್ಲಿ ಇಡೀ ದಿನ ಪೂಜಾ ಕಾರ್ಯ ಮಾಡಿಸಿ, ಅನ್ನಪೂರ್ಣಳನ್ನು ಮತ್ತು ಕರಿವೀರನನ್ನೂ ಆ ಪೂಜೆಯಲ್ಲಿ ಭಾಗಿಗಳಾಗುವಂತೆ ಮನವೊಲಿಸಿ ಪೂಜೆಗೆ ಕುಳಿತುಕೊಳ್ಳುವಂತೆ ಮಾಡಿದ್ದರು. ಒಂದು ದಿನ ಪೂರ್ತಿ ಪರಮೇಶ್ವರಪ್ಪ ಪೂಜಾ ಕಾರ್ಯದ ಎಲ್ಲಾ ವಿಧಿ ವಿಧಾನಗಳನ್ನು ಮಾಡಿ ಮುಗಿಸಿದರು. ಬಳಿಕ ಗಟ್ಟಿಯಾಗಿ ಮಂತ್ರವನ್ನು ಹೇಳಿಕೊಳ್ಳುತ್ತ ಇದ್ದಕ್ಕಿದ್ದಂತೆ ತೋಟದ ಮನೆಯ ಸುತ್ತಲೂ ಏನನ್ನೋ ಹುಡುಕುತ್ತಾ ಓಡಲು ಶುರು ಮಾಡಿದರು. ನಂತರ ಆ ಒಂದು ದಿನ ಕರಿವೀರ ಒಬ್ಬನೇ ಮಲಗಿ ಮಮ್ಮಲ ಮರುಗುತ್ತಾ ಕಾಲಿನ ಮೀನಖಂಡದಲ್ಲಿನ ಹುಣ್ಣು ಗುರುತಿಸಿಕೊಂಡ ದಿನ ಅವನ ನಾಯಿ ಬೊಗಳಿದ ದಿಕ್ಕಿನ ಪೊದೆಯ ಬಳಿಗೆ ಓಡುತ್ತಾ ಓಡುತ್ತಾ ಹೋಗಿ ಕೈಯಲ್ಲಿನ ಬೇವಿನ ಸೊಪ್ಪಿನಿಂದ ನೆಲಕ್ಕೆ ದಪ್ಪನೆ ಬಡಿಬಡಿದು ಬುಸುಗುಡುತ್ತಾ ನಿಂತರು. ಭೂಮಂತ್ರಕಾಳಿ.. ಭದ್ರಕಾಳೀ.. ಮಹಾಕಾಳಿ... ಒಲಿಗ್ಗೊ.... ಒಲಿಗ್ಗೊ... ಓಂ... ಎಂದು ಮಂತ್ರೋಚ್ಚಾರ ಮಾಡುತ್ತಾ ಎಡಗೈಯಲ್ಲಿದ್ದ ಎಲುಬಿನ ಮೂಳೆಯನ್ನು ನೆಲಕ್ಕೆ ಮುಟ್ಟಿಸಿ, ಇಲ್ಲಿ ನೆಲ ತೋಡುವಂತೆ ಹೇಳಿದ. ಕರಿವೀರ ಹತ್ತಿರದಲ್ಲೇ ಬಿದ್ದಿದ್ದ ಸಲಿಕೆಯಿಂದ ನೆಲ ತೋಡಿದಂತೆ ಹೆಣ್ಣು-ಗಂಡಿನ ಎರಡು ಮಣ್ಣಿನ ಗೊಂಬೆಗಳು, ನಿಂಬೆಹಣ್ಣು, ಕುಂಕುಮ ಹಚ್ಚಿದ ತಾಮ್ರದ ತಗಡಿನ ತುಂಡು, ಸುಣ್ಣಗಾಯಿ ಡಬ್ಬಿ ಮುಂತಾದವುಗಳು ಕಂಡವು.

ಪರಮೇಶ್ವರಪ್ಪ ಊಂ.. ಊಂ... ಎಂದು ಗಟ್ಟಿಯಾಗಿ ಅರಚುತ್ತಾ 'ನಾನು ಹೇಳಲಿಲ್ಲವೇ ಯಾರೋ ನಿಮಗೆ ಸರಿಯಾಗಿ ಮಾಟ ಮಾಡಿ ಮದ್ದು ಇಟ್ಟಿದ್ದಾರಂತ, ನೋಡಿ ಈಗ ಈ ಮಾಟದ ಮದ್ದು ಸಿಕ್ಕಿತು. ನನ್ನ ದೇವಿ ಸುಮ್ಮನೇ ಬಿಡುವಳೇ ಆ ದುಷ್ಟ ಶಕ್ತಿಗಳನ್ನು! ಒಲಿಗ್ಗೊ.... ಒಲಿಗ್ಗೊ ಸ್ವಾಮಿ ಒಲಿಗ್ಗೊ.... ಒಲಿಗ್ಗೊ' ಎಂದು ಗಟ್ಟಿಯಾಗಿ ಹೇಳುತ್ತಾ, ದೇವಿಯ ಜೊತೆಗೆ ಸ್ವತಃ ಅವನನ್ನೂ, ಈ ಮಾಟದ ಮದ್ದನ್ನು ಹೊರ ತೆಗೆದ ಹೆಚ್ಚುಗಾರಿಕೆಯ ಬಗ್ಗೆ ಹೊಗಳಿಕೊಳ್ಳಲು ಶುರು ಮಾಡಿದ. 'ನಾನು ಈ ವಯಸ್ಸಿನವರೆಗೆ ಎಂತೆಂತಹ